**ಹೆಚ್ಚಿನ ದಂಪತಿಗಳು ಸಂಭೋಗದಲ್ಲಿ ಕೊನೆಯಾಗದ ಸ್ಪರ್ಶ ನಿರುಪಯುಕ್ತವಾದದ್ದು ಎಂದುಕೊಂಡಿರುತ್ತಾರೆ. ಹಾಗಾಗಿ ಬೇರೆಬೇರೆ ಕಾರಣಗಳಿಗಾಗಿ ದೇಹಸಂಬಂಧಗಳು ವಿರಳವಾಗುತ್ತಾ ಬಂದಂತೆ ಸ್ಪರ್ಶ ನಿಂತುಹೋಗುತ್ತದೆ.**



ವಾರಕ್ಕೊಂದು ಸಾರಿ ಕೂಟದ ಬಯಕೆ ಮೂಡಿದರೆ ಪತ್ನಿಗೆ ವಾರಕ್ಕೆ ಮೂರು ಸಾರಿ ಬೇಕೆನ್ನಿಸಬಹುದು. ಪ್ರತಿರಾತ್ರಿ ಪತ್ನಿಯಿಂದ ಬೇಡಿಕೆ ಬರುವ ನಿರೀಕ್ಷೆ ಮತ್ತು ಅದನ್ನು ತಪ್ಪಿಸಿಕೊಳ್ಳುವ ಆತಂಕದಲ್ಲಿ ಪತಿ ಇದ್ದರೆ, ಬೇಡಿಕೆ ವ್ಯಕ್ತಪಡಿಸಿ ತಿರಸ್ಕೃತಳಾಗುವ ನಿರೀಕ್ಷೆಯಲ್ಲಿ ಪತ್ನಿ ಇರುತ್ತಾಳೆ. ಇಂತಹ ಮನಸ್ಥಿತಿಯಲ್ಲಿ ಕೂಟ ಸೌಮ್ಯಗಾಮಿಯ ಲೆಕ್ಕದಂತೆ ವಾರಕ್ಕೆ ಒಮ್ಮೆ ಮಾತ್ರ ನಡೆದರೂ ಇಬ್ಬರಿಗೂ ಆಸಕ್ತಿದಾಯಕವಾಗಿರುವುದಿಲ್ಲ.

ಇದಕ್ಕೆ ಸರಳ ಪರಿಹಾರಗಳಿಲ್ಲ. ಭಿನ್ನಾಭಿಪ್ರಾಯಗಳು ಬಂದ ಕೂಡಲೆ ತಮ್ಮ ವಿವಾಹದಲ್ಲಿ ಭಾರೀ ದುರಂತವಾಗಿದೆ ಎಂದುಕೊಳ್ಳದೆ ಬಯಕೆಯ ಅಸಮತೋಲ ಸಹಜವೆಂದು ಒಪ್ಪಿಕೊಂಡು ನಿಧಾನವಾಗಿ ಒಮ್ಮತವನ್ನು ಮೂಡಿಸಿಕೊಳ್ಳಲು ಯತ್ನಿಸಬೇಕು. ಬಯಕೆಯನ್ನು ವ್ಯಕ್ತಪಡಿಸುವುದು ನಾಚಿಕೆಯ ವಿಷಯವಲ್ಲ ಮತ್ತು ಅಸಮ್ಮತಿ ಸೂಚಿಸುವುದು ಸಂಗಾತಿಯ ಪೂರ್ಣ ವ್ಯಕ್ತಿತ್ವದ ತಿರಸ್ಕಾರವಲ್ಲ ಎನ್ನುವುದು ಇಬ್ಬರಿಗೂ ಮನದಟ್ಟಾಗಬೇಕು. ತೀವ್ರ ಭಿನ್ನಾಭಿಪ್ರಾಯಗಳಿದ್ದಾಗ ತಜ್ಞರ ಸಲಹೆ ಪಡೆಯಬಹುದು.

### ಮಗುವಿನ ಪ್ರವೇಶ

ಮದುವೆಯಾದ ಹೊಸತರಲ್ಲಿ ಇಬ್ಬರಿಗೂ ಸಂಗಾತಿಯನ್ನು ಅರಿತುಕೊಳ್ಳುವ ತವಕದ ಜೊತೆಗೆ ಲೈಂಗಿಕತೆಗೆ ಹೊಸತನದ ಮೆರುಗು ಇರುತ್ತದೆ. ಹಾಗಾಗಿ ಹೆಚ್ಚಿನ ದಂಪತಿಗಳಿಗೆ ಇದು ಕಾಮಾನುಭವದ ಉತ್ತುಂಗದ ಸಮಯ. ಈ ಹಂತದಲ್ಲೇ ಕಾಮ ಅತೃಪ್ತಿದಾಯಕವಾಗಿದ್ದರೆ ಒಪ್ಪಿಗೆ ಇಲ್ಲದ ಮದುವೆ, ಲೈಂಗಿಕತೆಯ ಬಗೆಗೆ ಅಜ್ಞಾನ ಮತ್ತು ತಪ್ಪುತಿಳಿವಳಿಕೆಗಳು, ದೈಹಿಕ ದೌರ್ಜನ್ಯ ಮುಂತಾದವು ಕಾರಣವಾಗಿರಬಹುದು.

ಮಗುವೊಂದು ಮನೆತುಂಬಿದೊಡನೆ ಅದು ದಂಪತಿಗಳು ಮನಸ್ಸನ್ನೂ ತುಂಬುವುದರ ಜೊತೆಗೆ ಅವರ ಸಮಯ ಗಮನಗಳನ್ನೂ ಪಡೆದುಕೊಳ್ಳುತ್ತದೆ. ಹಾಗಾಗಿ ದಂಪತಿಗಳಿಗೆ ಪರಸ್ಪರರಿಗಾಗಿ ಹೆಚ್ಚಿನ ಸಮಯವನ್ನು ಕೊಡಲಾಗುವುದಿಲ್ಲ. ಜೊತೆಗೆ ಲೈಂಗಿಕತೆಯ ಉದ್ದೇಶ ಮಾನವನ ಸ್ಪರ್ಶದ ಹಸಿವನ್ನು ತೀರಿಸುವುದೂ ಆಗಿರುವುದರಿಂದ ಮಗುವಿನ ಒಡನಾಟ ತಂದೆತಾಯಿಯರ (ನಿರ್ದಿಷ್ಟವಾಗಿ ತಾಯಂದಿರ) ಸ್ಪರ್ಶದ ಅಗತ್ಯಗಳನ್ನು ಭಾಗಶಃ ಪೂರೈಸುತ್ತದೆ. ಹಾಗಾಗಿ ಕಾಮಕೂಟಗಳ ಒತ್ತಾಸೆ ಕಡಿಮೆಯಾಗುವ ಸಾಧ್ಯತೆಗಳಿರುತ್ತದೆ ಎಂದು ಲೈಂಗಿಕ ಚಿಕಿತ್ಸಕಿ ಎಸ್ತರ್ ಪೆರೇಲ್ ಹೇಳುತ್ತಾರೆ. ದಂಪತಿಗಳು ಇದರ ಬಗೆಗೆ ಮುಕ್ತವಾಗಿ ಮಾತನಾಡಿಕೊಳ್ಳುವ ಅಗತ್ಯವಿರುತ್ತದೆ. ನಿಧಾನವಾಗಿ ಸಂಗಾತಿಯ ಅಗತ್ಯಗಳನ್ನು ಕೀಳುಗೈಯದೆ ಒಮ್ಮತವನ್ನು ಮೂಡಿಸಿಕೊಳ್ಳುವುದು ಸಾಧ್ಯವಿದೆ.

### ಸ್ಪರ್ಶದ ಅಗತ್ಯ

ಪ್ರಾಣಿಸಂಕುಲಕ್ಕೆ ಸ್ವಜಾತೀಯರೊಡನೆ ಸಂಪರ್ಕ ಸಾಧಿಸಲು ಸ್ಪರ್ಶ ಪ್ರಮುಖ ಸಾಧನ. ಮಾನವ ಮಾತನಾಡುವುದನ್ನು ಕಲಿತ ಮೇಲೆ ಭಾಷೆಯ ಮೂಲಕ ಎಲ್ಲರನ್ನೂ ತಲುಪುವುದು ಸಾಧ್ಯ ಎಂಬ ಭ್ರಮೆಯಲ್ಲಿದ್ದಾನೆ.




# ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

**ಪಂಡಿತ. ಶ್ರೀ ಗಣೇಶ್ ಕುಮಾರ್** ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

**ಬೆಂಗಳೂರು ಖಾಯಂ ಮನೆ ವಿಳಾಸ** ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

**ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ**

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು **9880444450**